**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**MVC**-498/2025 **PW**: 1

**ದಿಃ 11.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವಕೀಲರಿಂದಃ**

ನಾನು ನನ್ನ ಅರ್ಜಿಗೆ ಸಂಬಂದಿಸಿದಂತೆ ಪ್ರವವ ವರದಿ ದೃಡೀಕೃತ ನಕಲನ್ನು ನಿಪಿ 1 ಎಂದು, ದೂರು ದೃಡೀಕೃತ ನಕಲನ್ನು ನಿಪಿ 2 ಎಂದು, ಅಪರಾದ ಸ್ದಳದ ವಿವರ ನಮೂನೆಯ ದೃಡೀಕೃತ ನಕಲನ್ನು ನಿಪಿ 3 ಎಂದು, ಗಾಯದ ಪ್ರಮಾಣ ಪತ್ರದೃಡೀಕೃತ ನಕಲನ್ನು ನಿಪಿ 4 ಎಂದು, ಐಎಂವಿ ವರದಿಯ ದೃಡೀಕೃತ ನಕಲನ್ನು ನಿಪಿ 5 ಎಂದು, ದೋಷಾರೋಪನಾ ದೃಡೀಕೃತ ನಕಲನ್ನು ನಿಪಿ 6 ಎಂದು, ನೋಟರಿಯವರು ದೃಡೀಕರಿಸಿದ ಆದಾರ ಕಾರ್ಡನ್ನು ನಿಪಿ 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರರು ಶ್ರೀಮತಿ ವಿ ವಿ ಪಿ ವಕೀಲರಿಂದಃ**

ಮೋಟಾರ ಸೈಕಲ ಸಂಖ್ಯೆಃಕೆಎ-63/ಎಚ್ 7080 ಈ ವಾಹನ ನನ್ನ ಅಣ್ಣನದಾಗಿದೆ. ಈ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಈ ಪ್ರಕರಣದಲ್ಲಿ ನಾನು ದೂರು ಕೊಟ್ಟಿರುತ್ತೇನೆಂದರೆ ಸರಿ. ನಾನು ಎನ್ ಎಚ್ 48 ಆ ದಿನ ಸರ್ವಿಸ ರೋಡನಲ್ಲಿ ಗಾಡಿ ತೆಗೆದುಕೊಂಡು ಹೋಗುತ್ತಿದ್ದೆ ಎಂದು ಹೇಳಿದ್ದೆ ಎಂದರೆ ಸರಿ. ಬೆಳಿಗ್ಗೆ 11.20 ರ ಸಮಯದಲ್ಲಿ ಗಾಡಿಗಳು ಬಹಳ ಅಡ್ಡಾಡುತ್ತಿರುತ್ತವೆಂದರೆ ಸರಿ. ಆ ದಿನ ನಾವು ಮೂರು ಮಂದಿ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದೇವೆಂದು ದೂರಿನಲ್ಲಿ ಹೇಳಿದ್ದೇನೆಂದರೆ ಸರಿ. ಆ ದಿನ ನಾನು ಜೋರಾಗಿ ನಿಷ್ಕಾಳಜಿತನದಿಂದ ಚಾಲನೆ ಮಾಡುತ್ತಿದ್ದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಟ್ರಕ್ಕನ ಚಾಲಕ ತನ್ನ ವಾಹನವನ್ನು ರಸ್ತೆ ಎಡಬಾಗದಲ್ಲಿ ನಿದಾನವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಎಂದರೆ ಸಾಕ್ಷಿ ಅವರೇ ವೇಗವಾಗಿ ಬಂದಿರುತ್ತಾರೆಂದು ಸಾಕ್ಷಿ ನುಡಿಯುತ್ತಾರೆ. ಸದರಿಯವರು ನಿದಾನವಾಗಿಯೇ ಬರುತ್ತಿದ್ದು ನಾನು ವೇಗವಾಗಿ ಗಾಡಿಯನ್ನು ಓಡಿಸಿದ್ದರಿಂದ ನನ್ನ ತಪ್ಪಿನಿಂದಲೇ ಅಪಘಾತವಾಗಿದೆ ಎಂದರೆ ಸಾಕ್ಷಿ ಅದು ಸರಿಯಲ್ಲ ಅವರೇ ವೇಗವಾಗಿ ಬಂದು ನಮಗೆ ಡಿಕ್ಕಿ ಹೊಡೆದಿರುತ್ತಾರೆಂದು ನುಡಿಯುತ್ತಾರೆ. ನಮಗೆ ಡಿ ಎಲ್ ಇಲ್ಲ ಎಂದು ಪೊಲೀಸರು ನನ್ನ ಮೇಲೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆಂದರೆ ಸರಿ. ನಾನು ಚಲಿಸಿಕೊಂಡು ಹೋಗುತ್ತಿದ್ದ ವಾಹನಕ್ಕೆ ವಿಮೆ ಮಾಡಿಸಿರಲಿಲ್ಲ ಎಂದರೆ ಸರಿ. ಈ ಕೇಸನಲ್ಲಿ ನಾನು ನನ್ನ ವಾಹನದ ಮಾಲೀಕರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನಗೆ ಡಿ ಎಲ್ ಇಲ್ಲದೇ ಸದರಿ ವಾಹನವನ್ನು ವೇಗವಾಗಿ ಓಡಿಸಿ ನನ್ನ ತಪ್ಪಿನಿಂದ ಅಪಘಾತ ಮಾಡಿರುವ ಕಾರಣ ಎದುರುದಾರರು ನನಗೆ

ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಟ್ರಕ್ಕ ಚಾಲಕನಿಗೆ ಡಿ ಎಲ್ ಇರಲಿಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ. ನಾನು ಆ ದಿನ ಸರಕಾರಿ ಆಸ್ಪತ್ರೆಗೇ ಹೋಗುವ ಬದಲು ನಾನು ಪರಿಹಾರ ಕೇಳುವ ಸಲುವಾಗಿ ಖಾಸಗಿ ಆಸ್ಪತ್ರೆಗೆ ಹೋಗಿರುತ್ತೇನೆಂದರೆ ಸಾಕ್ಷಿ ಅಟೋದವನೇ ಸೀದಾ ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗಿರುತ್ತಾನೆ ಎನ್ನುತ್ತಾರೆ. ನಾನೇ ಅಟೋ ಮಾಡಿಕೊಂಡು ಅಲ್ಲಿಗೆ ಹೋಗಿರುತ್ತೇನೆಂದರೆ ಸರಿ. ನನಗೆ ಸಾದಾ ಸ್ವರೂಪದ ಗಾಯಗಳಾಗಿದ್ದು ನಾನು ತೋರಿಸಿಕೊಂಡು ಹಾಗೆಯೇ ಹೋಗಿರುತ್ತೇನೆ ನಾನು ಒಳರೋಗಿಯಾಗಿ ದಾಖಲಾಗಿಲ್ಲ ಎಂದರೆ ಸಾಕ್ಷಿ ನಾನು ಒಳರೋಗಿಯೋಗಿ ದಾಖಲಾಗಿದ್ದೆ ಎನ್ನುತ್ತಾರೆ. ನಾನು ದಾಖಲಾದ ಬಗ್ಗೆ ಯಾವದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಯಾವ ವೈದರು ನಿಮಗೆ ಚಿಕಿತ್ಸೆ ಕೊಟ್ಟರೆಂದರೆ ಸಾಕ್ಷಿ ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ನನಗೆ ಯಾವದೇ ಗಾಯಗಳಾಗಿಲ್ಲ ಆದರೂ 50 ಸಾವಿರ ರೂ ಖರ್ಚು ಮಾಡಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 50 ಸಾವಿರ ರೂ ಖರ್ಚು ಮಾಡಿದ ಬಗ್ಗೆ ನ್ಯಾಯಾಲಯದ ಮುಂದೆ ಯಾವದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನಗೆ ದುಡಿಮೆ ಲಾಸ್ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ ಹಾಗೂ ನನಗೆ ಈಗ ಯಾವದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ದುಡಿಮೆ ಲಾಸ ಆಗಿದೆ ಎಂದು ತೋರಿಸಲ ನ್ಯಾಯಾಲಯಕ್ಕೆ ಯಾವದೇ ದಾಖಲೆ ಹಾಕಿಲ್ಲ. ನನ್ನ ತಪ್ಪಿನಿಂದದಾದ ಅಪಘಾತದ ಬಗ್ಗೆ ಸುಳ್ಳು ದೂರು ಕೊಟ್ಟು ನಾನು ಪರಿಹಾರ ಕೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು 25 ಸಾವಿರ ರೂ ದುಡಿಯುತ್ತಿದ್ದೆ ಎನ್ನುವದು ಸುಳ್ಳು ಎಂದರ ಸರಿಯಲ್ಲ. ನಾನು ನನ್ನ ಕುಟುಂಬವನ್ನು ನೋಡಿಕೊಳ್ಳುತ್ತಿರಲಿಲ್ಲ ಅವರೆಲ್ಲರೂ ತಮ್ಮ ತಮ್ಮ ಜೀವನ ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

ಸದರಿ ಅಪಘಾತ 1 ನೇ ಎದುರುದಾರನ ವಾಹನ ಚಾಲಕನಿಂದ ಆಗಿಲ್ಲ ಆ ಕಾರಣಕ್ಕೆ 2 ನೇ ಎದುರುದಾರರು ಪರಿಹಾರ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಾ -**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.